# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1185 |
| ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಹೆಚ್.ಎಂ.ರಮೇಶಗೌಡ(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 30.09.2020 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಎರಡು ವರ್ಷಗಳಿಂದ ಕೃಷಿ ಇಲಾಖೆಯಿಂದ ಕೃಷಿ ಹೊಂಡ ನಿರ್ಮಾಣಕ್ಕಾಗಿ ಬಿಡುಗಡೆಯಾದ ಅನುದಾನವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಕಳೆದ ಎರಡು ವರ್ಷಗಳಿಂದ (2018-19, 2019-20) ಕೃಷಿ ಇಲಾಖೆಯಿಂದ ಕೃಷಿ ಹೊಂಡ ನಿರ್ಮಾಣಕ್ಕಾಗಿ ಬಿಡುಗಡೆಯಾದ ಜಿಲ್ಲಾವಾರು ಅನುದಾನ ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಿದೆ. |
| ಆ) | ಕೃಷಿ ಹೊಂಡ ಸಹಾಯಧನ ಸಮರ್ಪಕವಾಗಿ ರೈತರಿಗೆ ಸೇರುತ್ತಿದೆಯೇ; (ವಿವರ ನೀಡುವುದು) | ಕೃಷಿ ಹೊಂಡ ಸಹಾಯಧನ ಸಮರ್ಪಕವಾಗಿ ರೈತರಿಗೆ ವಿತರಿಸಲಾಗುತ್ತಿದೆ. ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡ ನಿರ್ಮಿಸಲು ರೈತರಿಗೆ 3 ರೀತಿಯ ಅವಕಾಶಗಳನ್ನು ಕಲ್ಪಿಸಿ ಕೊಡಲಾಗಿರುತ್ತದೆ.<br>1.ರೈತರು ಸ್ವತಃ ಕೃಷಿ ಹೊಂಡ ನಿರ್ಮಿಸಿಕೊಂಡಲ್ಲಿ, ಸಂಪೂರ್ಣ ಸಹಾಯಧನವನ್ನು ರೈತರ ಖಾತೆಗೆ ವರ್ಗಾಯಿಸಲಾಗುವುದು.<br>2. ರೈತರು ಆಯ್ಕೆ ಮಾಡಿರುವ ಜೆ.ಸಿ.ಬಿ/Hitachi ಮಾಲೀಕರ ಮೂಲಕ ಕೃಷಿ ಹೊಂಡ ನಿರ್ಮಾಣ ಮಾಡಿದಲ್ಲಿ ಕೃಷಿ ಹೊಂಡ ನಿರ್ಮಾಣವನ್ನು ಸಂಪೂರ್ಣವಾಗಿ ಹಾಗೂ ಅಚ್ಚುಕಟ್ಟಾಗಿ ನಿರ್ಮಾಣ ಮಾಡಿರುವ ಬಗ್ಗೆ ಸ್ಥಳೀಯ ಇಲಾಖಾ ಅಧಿಕಾರಿಗಳು ಅಳತೆ ತಪಾಸಣೆ ದೃಢೀಕರಿಸುವುದು ಹಾಗೂ ಸಂಬಂಧಪಟ್ಟ ರೈತರಿಂದ ಈ ಬಗ್ಗೆ ದೃಢೀಕರಣ ಪಡೆದು ಅವರ ಕೋರಿಕೆ ಪ್ರಕಾರ ಜೆ.ಸಿ.ಬಿ.ಮಾಲೀಕರಿಗೆ ಸಹಾಯಧನ ಪಾವತಿಸಲಾಗುವುದು.<br>3. ಯೋಜನೆಯಡಿ ಅನುಮೋದಿತ ಸಂಸ್ಥೆಗಳಿಂದ ಕೃಷಿ ಹೊಂಡ ನಿರ್ಮಿಸಿಕೊಳ್ಳಲು ರೈತರು ಇಚ್ಛಿಸಿದಲ್ಲಿ ಸಂಸ್ಥೆಗಳ ಹೆಸರಿನಲ್ಲಿ ರೈತ ವಂತಿಕೆಯನ್ನು ಪಡೆಯಲಾಗುತ್ತದೆ. ನಂತರ ಕೃಷಿ ಹೊಂಡ ನಿರ್ಮಾಣವನ್ನು ಸಂಪೂರ್ಣವಾಗಿ ಹಾಗೂ |

| | | |
|---|---|---|
| | | ಅಚ್ಚುಕಟ್ಟಾಗಿ ನಿರ್ಮಾಣ ಮಾಡಿರುವ ಬಗ್ಗೆ ಸ್ಥಳೀಯ ಇಲಾಖಾ ಅಧಿಕಾರಿಗಳು ಅಳತೆ ತಪಾಸಣೆ ದೃಢೀಕರಿಸುವುದು ಹಾಗೂ ಸಂಬಂಧಪಟ್ಟ ರೈತರಿಂದ ಈ ಬಗ್ಗೆ ದೃಢೀಕರಣ ಪಡೆದು, ಸಂಬಂಧಿಸಿದ ಸಂಸ್ಥೆಗಳಿಗೆ ಸಹಾಯಧನ ಪಾವತಿಸಲಾಗುವುದು. |
| ಇ) | ಕಳೆದ ಎರಡು ವರ್ಷಗಳಿಂದ ಎಷ್ಟು ಫಲಾನುಭವಿಗಳಿಗೆ ಸಹಾಯಧನ ವಿತರಣೆಯಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಕಳೆದ ಎರಡು ವರ್ಷಗಳಲ್ಲಿ ( 2018-19, 2019-20 ) ಜಿಲ್ಲಾವಾರು ಸಹಾಯಧನ ವಿತರಣೆಯಾಗಿರುವ ಫಲಾನುಭವಿಗಳ ಸಂಖ್ಯೆ ಅನುಬಂಧ-2 ರಲ್ಲಿ ನೀಡಿದೆ. |
| ಈ) | ಕೃಷಿ ಇಲಾಖೆಯ ನೂತನ ಆಪ್ ಎಷ್ಟು ಸಮರ್ಪಕವಾಗಿ ಕೆಲಸ ಮಾಡುತ್ತಿದೆ; ಆಪ್ ಬಳಕೆಯ ಕುರಿತಾಗಿ ರೈತರಿಗೆ ತರಬೇತಿ ನೀಡಲಾಗಿದೆಯೇ? (ವಿವರ ನೀಡುವುದು) | 2020-21ನೇ ಸಾಲಿನಲ್ಲಿ ಬೆಳೆ ಸಮೀಕ್ಷೆ ಯೋಜನೆಯನ್ನು ಸಿಆಸುಇ (ಇ-ಆಡಳಿತ) ರವರು ಅಭಿವೃದ್ಧಿ ಪಡಿಸಿರುವ ಮಾರ್ಪಡಿಸಿದ ರೈತರ ಮೊಬೈಲ್ ಆಪ್ ಬಳಸಿಕೊಂಡು ಅನುಷ್ಠಾನಗೊಳಿಸಲು ಕೃಷಿ ಇಲಾಖೆಯನ್ನು ನೋಡಲ್ ಇಲಾಖೆಯಾಗಿ ಮಾಡಲಾಗಿದ್ದು, ಆಪ್ ಸಮರ್ಪಕವಾಗಿ ಕೆಲಸ ಮಾಡುತ್ತಿದೆ.<br>"ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್" ಬಳಕೆ ಕುರಿತಾಗಿ ರೈತರಿಗೆ ಆಯಾ ಗ್ರಾಮದಲ್ಲಿ ಲಭ್ಯವಿರುವ ಮಾಹಿತಿ ತಂತ್ರಜ್ಞಾನದ ಬಗ್ಗೆ ತಿಳುವಳಿಕೆ ಇರುವ ಯುವಕರ (ಖಾಸಗಿ ನಿವಾಸಿಗಳು) ಮತ್ತು ಸ್ಥಳೀಯ ಅಧಿಕಾರಿಗಳ ಮೂಲಕ ತರಬೇತಿ ನೀಡಲಾಗಿದೆ. ಮುಂದುವರೆದು, ಬೆಳೆ ಸಮೀಕ್ಷೆ ಕಾರ್ಯಕ್ರಮದ ಅಂಗವಾಗಿರುವ ಎಲ್ಲಾ ಅಧಿಕಾರಿ/ ಸಿಬ್ಬಂದಿ ವರ್ಗದವರಿಗೆ /ಆಯಾ ಜಿಲ್ಲೆ /ತಾಲ್ಲೂಕು/ ಹೋಬಳಿ/ ಗ್ರಾಮಗಳಲ್ಲಿ ಬೆಳೆಯುವ ಎಲ್ಲಾ ಬೆಳೆಗಳ ಕುರಿತಾಗಿ ಮತ್ತು ಆಪ್ ಕುರಿತು ಅಗತ್ಯ ತರಬೇತಿಯನ್ನು ಸಂಪನ್ಮೂಲ ವ್ಯಕ್ತಿಗಳ ಮೂಲಕ ಮತ್ತು ಜನಪ್ರತಿನಿಧಿಗಳನ್ನೊಳಗೊಂಡು ಪ್ರಚಾರ ಮೂಲಕ ಹಮ್ಮಿಕೊಳ್ಳಲಾಗಿರುತ್ತದೆ. |

ಸಂಖ್ಯೆ: AGRI-AML/200/2020

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

## ಅನುಬಂಧ-1

**2018-19 ಮತ್ತು 2019-20 ನೇ ಸಾಲಿನಲ್ಲಿ ಕೃಷಿ ಇಲಾಖೆಯಿಂದ ಕೃಷಿ ಹೊಂಡ ನಿರ್ಮಾಣಕ್ಕಾಗಿ ಬಿಡುಗಡೆಯಾದ ಅನುದಾನ ಜಿಲ್ಲಾವಾರು ಮಾಹಿತಿ (ಆರ್ಥಿಕ ರೂ. ಲಕ್ಷಗಳಲ್ಲಿ)**

| ವರ್ಷ | | 2018-19 | | 2019-20 | |
|---|---|---|---|---|---|
| ಕ್ರ.ಸಂ. | ಜಿಲ್ಲೆ | ಕೃಷಿ ಭಾಗ್ಯ | ವಿಶೇಷ ಅಭಿವೃದ್ಧಿ ಯೋಜನೆ | ಕೃಷಿ ಭಾಗ್ಯ | ವಿಶೇಷ ಅಭಿವೃದ್ಧಿ ಯೋಜನೆ |
| 1 | ಬಾಗಲಕೋಟೆ | 1258.87 | 59.80 | 467.13 | 114.00 |
| 2 | ಬೆಂಗಳೂರು(ನಗರ) | 87.71 | 2.67 | 51.17 | 8.03 |
| 3 | ಬೆಂಗಳೂರು(ಗ್ರಾ) | 389.56 | 1.42 | 199.49 | 7.12 |
| 4 | ಬೆಳಗಾವಿ | 2719.59 | 82.00 | 1182.85 | 121.00 |
| 5 | ಬಳ್ಳಾರಿ | 1647.41 | 135.45 | 459.39 | 131.00 |
| 6 | ಬೀದರ್ | 1361.23 | 127.91 | 618.11 | 286.00 |
| 7 | ಚಾಮರಾಜನಗರ | 372.45 | 90.55 | 240.89 | 108.00 |
| 8 | ಚಿಕ್ಕಬಳ್ಳಾಪುರ | 979.96 | 101.22 | 522.18 | 119.00 |
| 9 | ಚಿಕ್ಕಮಗಳೂರು | 444.68 | 33.07 | 317.84 | 66.00 |
| 10 | ಚಿತ್ರದುರ್ಗ | 1305.66 | 131.25 | 371.91 | 174.00 |
| 11 | ದಕ್ಷಿಣ ಕನ್ನಡ | 120.01 | 0.00 | 81.00 | 0.00 |
| 12 | ದಾವಣಗೆರೆ | 1667.03 | 86.79 | 321.42 | 60.00 |
| 13 | ಧಾರವಾಡ | 1372.80 | 32.03 | 1603.96 | 145.00 |
| 14 | ಗದಗ | 1496.88 | 21.59 | 1487.03 | 145.00 |
| 15 | ಹಾಸನ | 1013.74 | 53.78 | 642.27 | 122.00 |
| 16 | ಹಾವೇರಿ | 635.71 | 68.27 | 609.23 | 105.00 |
| 17 | ಕಲಬುರಗಿ | 2420.77 | 310.29 | 1117.59 | 653.00 |

| | | | | | |
|---|---|---|---|---|---|
| 18 | ಕೊಡಗು | 274.62 | 0.00 | 597.43 | 0.00 |
| 19 | ಕೋಲಾರ್ | 1555.77 | 32.08 | 685.40 | 60.00 |
| 20 | ಕೊಪ್ಪಳ | 1898.13 | 153.74 | 933.25 | 238.00 |
| 21 | ಮಂಡ್ಯ | 449.27 | 74.12 | 177.75 | 104.00 |
| 22 | ಮೈಸೂರು | 646.64 | 46.02 | 301.84 | 100.00 |
| 23 | ರಾಯಚೂರು | 1064.26 | 151.69 | 1089.27 | 392.00 |
| 24 | ರಾಮನಗರ | 333.81 | 56.64 | 260.83 | 98.00 |
| 25 | ಶಿವಮೊಗ್ಗ | 233.48 | 24.38 | 116.85 | 21.00 |
| 26 | ತುಮಕೂರು | 1712.93 | 201.86 | 642.37 | 330.00 |
| 27 | ಉಡುಪಿ | 63.71 | 0.00 | 37.05 | 0.00 |
| 28 | ಉತ್ತರ ಕನ್ನಡ | 159.20 | 15.51 | 84.66 | 11.00 |
| 29 | ವಿಜಯಪುರ | 1188.29 | 134.77 | 863.20 | 219.00 |
| 30 | ಯಾದಗಿರಿ | 329.64 | 65.13 | 150.57 | 58.00 |
| ಒಟ್ಟು | | **29203.83** | **2294.00** | **16233.91** | **3998.00** |

## ಅನುಬಂಧ-2

**ಕಳೆದ ಎರಡು ವರ್ಷಗಳಲ್ಲಿ ( 2018-19, 2019-20 ) ಜಿಲ್ಲಾವಾರು ಸಹಾಯಧನ ವಿತರಣೆಯಾಗಿರುವ ಫಲಾನುಭವಿಗಳ ಸಂಖ್ಯೆ** (ಭೌತಿಕ ಸಂಖ್ಯೆಗಳಲ್ಲಿ)

| ವರ್ಷ | | 2018-19 | | 2019-20 | |
|---|---|---|---|---|---|
| ಕ್ರ.ಸಂ. | ಜಿಲ್ಲೆ | ಕೃಷಿ ಭಾಗ್ಯ ಯೋಜನೆ | ವಿಶೇಷ ಅಭಿವೃದ್ಧಿ ಯೋಜನೆ | ಕೃಷಿ ಭಾಗ್ಯ ಯೋಜನೆ | ವಿಶೇಷ ಅಭಿವೃದ್ಧಿ ಯೋಜನೆ |
| 1 | ಬಾಗಲಕೋಟೆ | 2451 | 115 | 883 | 219 |
| 2 | ಬೆಂಗಳೂರು(ನಗರ) | 299 | 10 | 203 | 24 |
| 3 | ಬೆಂಗಳೂರು(ಗ್ರಾ) | 1224 | 8 | 558 | 23 |
| 4 | ಬೆಳಗಾವಿ | 5884 | 159 | 1818 | 243 |
| 5 | ಬಳ್ಳಾರಿ | 2912 | 208 | 767 | 210 |
| 6 | ಬೀದರ್ | 2979 | 203 | 1058 | 521 |
| 7 | ಚಾಮರಾಜನಗರ | 956 | 260 | 677 | 300 |
| 8 | ಚಿಕ್ಕಬಳ್ಳಾಪುರ | 2023 | 196 | 1024 | 214 |
| 9 | ಚಿಕ್ಕಮಗಳೂರು | 1348 | 63 | 720 | 122 |
| 10 | ಚಿತ್ರದುರ್ಗ | 2924 | 248 | 944 | 320 |
| 11 | ದಕ್ಷಿಣ ಕನ್ನಡ | 480 | 0 | 251 | 0 |
| 12 | ದಾವಣಗೆರೆ | 4012 | 205 | 655 | 136 |
| 13 | ಧಾರವಾಡ | 4099 | 49 | 2551 | 240 |
| 14 | ಗದಗ | 2316 | 28 | 1819 | 183 |
| 15 | ಹಾಸನ | 2307 | 117 | 1305 | 266 |
| 16 | ಹಾವೇರಿ | 1552 | 152 | 958 | 174 |
| 17 | ಕಲಬುರಗಿ | 6855 | 705 | 2521 | 1531 |
| 18 | ಕೊಡಗು | 548 | 0 | 1094 | 0 |
| 19 | ಕೋಲಾರ | 3379 | 58 | 1312 | 110 |

| | | | | | |
|---|---|---|---|---|---|
| 20 | ಕೊಪ್ಪಳ | 3720 | 206 | 1200 | 318 |
| 21 | ಮಂಡ್ಯ | 1301 | 240 | 435 | 240 |
| 22 | ಮೈಸೂರು | 1838 | 218 | 708 | 280 |
| 23 | ರಾಯಚೂರು | 2487 | 154 | 1236 | 682 |
| 24 | ರಾಮನಗರ | 743 | 122 | 534 | 182 |
| 25 | ಶಿವಮೊಗ್ಗ | 595 | 55 | 304 | 41 |
| 26 | ತುಮಕೂರು | 4082 | 485 | 1418 | 645 |
| 27 | ಉಡುಪಿ | 354 | 0 | 154 | 0 |
| 28 | ಉತ್ತರ ಕನ್ನಡ | 488 | 49 | 206 | 32 |
| 29 | ವಿಜಯಪುರ | 2600 | 253 | 1686 | 439 |
| 30 | ಯಾದಗಿರಿ | 826 | 168 | 482 | 143 |
| ಒಟ್ಟು | | **67582** | **4734** | **29481** | **7838** |